ಮಾಂಗುಡಿಯ ಕವಿ

ಕಥೆ: ರೇವತಿ

ಚಿತ್ರ : ಶಂಕರ್

1 ಮಾಂಗುಡಿಯ ಪ್ರಖ್ಯಾತ ಕವಿ ಮರುದನಾರ್ ಮುಂದೆ ಅನೇಕ ಕವಿಗಳು ನೆರೆದಿದ್ದರು.

ಮಹಾಕವಿಗಳೇ, ನಮ್ಮ ಪಾಂಡ್ಯದೊರೆ ಇನ್ನೂ ತರುಣನೆಂದೂ, ಅನುಭವವಿಲ್ಲದವನೆಂದೂ ಭಾವಿಸಿ ಶತ್ರುಗಳು ನಮ್ಮ ರಾಜ್ಯದ ಮೇಲೆ ದಾಳಿಯಿಟ್ಟರು. ಆದರೆ ನಮ್ಮ ದೊರೆ ಅವರನ್ನೆಲ್ಲ ಸೋಲಿಸಿದನು. ನಮಗೆ ಇದೆಲ್ಲ ಹೆಮ್ಮೆಯ ವಿಷಯ.

ಅದೇನೋ ನಿಜ. ಆದರೆ ರಾಜ ಮತ್ತೆ ಯುದ್ಧಕ್ಕೆ ಹೊರಟಿದ್ದಾನೆ. ಈಗ ಯಾರೂ ದಾಳಿ ಮಾಡಿಲ್ಲ, ನಮಗೆ ಶತ್ರುಗಳೇ ಇಲ್ಲ. ಮತ್ತೇಕೆ ಯುದ್ಧ? ಜನರ ಏಳಿಗೆಗಾಗಿ ಕೆಲಸ ಮಾಡುವುದು ಯಾವಾಗ?

2 ನಾವು ಪಾಂಡ್ಯದೊರೆಯ ಶೌರ್ಯವನ್ನು ಕುರಿತು ಹಾಡಿ ಹೊಗಳಿದೆವು. ಅದನ್ನು ಕೇಳಿ ರಾಜನ ಎದೆಯುಬ್ಬಿ, 'ಯುದ್ಧ, ಯುದ್ಧ' ಎಂದು ಅವನ ಭುಜಗಳು ಉತ್ಸಾಹಗೊಂಡಿವೆ. ಈ ಯುದ್ಧೋತ್ಸಾಹದಿಂದಲೇ ಅವನು ಈಗ ಮತ್ತೆ ಆಕ್ರಮಿಸಲು ಹೊರಟಿದ್ದಾನೆ. ಹೊಸ ರಾಜ್ಯಗಳನ್ನು ಗೆಲ್ಲಲು ಹೊರಟಿದ್ದಾನೆ.

3 ಆದರೆ ಹೀಗೆ ಯುದ್ಧ ಮಾಡುತ್ತಲೇ ಹೋದರೆ ಅದರಿಂದ ರಾಜ್ಯದ ಜನತೆ ಆತಂಕಗೊಳ್ಳುವರಲ್ಲವೆ? ರಾಜನು ನಿಮ್ಮ ಶಿಷ್ಯ. ಅವನು ಹೀಗೆ ಮಾಡದಂತೆ ತಡೆಯುವುದು ನಿಮ್ಮ ಕರ್ತವ್ಯ. ಜನರ ಕಲ್ಯಾಣದ ಕಾರ್ಯಗಳಲ್ಲಿ ಅವನು ತೊಡಗುವಂತೆ ನೀವು ಮಾಡಬೇಕು.

ರಾಜನು ಜನರ ಕಲ್ಯಾಣ ಮಾಡುವಂತೆ ಮಾಡಿ.

4

ಬನ್ನಿ, ಮಹಾಕವಿಗಳೇ. ನನ್ನ ಹೊಸ ದಂಡಯಾತ್ರೆಯ ವಿಜಯವನ್ನು ಕೊಂಡಾಡುವಂತೆ ನೀವು ಒಂದು ಕಾವ್ಯರಚನೆ ಮಾಡಿ. ನಿಮಗೆ ಒಂದು ಹೊಸ ಅವಕಾಶ.

ಮಹಾರಾಜ, ಇನ್ನೊಂದು ದಂಡಯಾತ್ರೆ ! ಅದು ಅಗತ್ಯವೆ?

ಆದರೆ ರಾಜ ಅದನ್ನು ಕಿವಿಗೆ ಹಾಕಿಕೊಳ್ಳಲಿಲ್ಲ.

5

ನಮ್ಮ ಆಸ್ಥಾನ ಕಲಾವಿದ ಮುತ್ತುಮಣಿ ರಚಿಸಿದ ಚಿತ್ರಕಲೆಗಳನ್ನು ನಾನು ನೋಡುತ್ತ ಹೋದೆ. ಅವನ ಚಿತ್ರಗಳಲ್ಲಿ ಯುದ್ಧದ ಚಿತ್ರಗಳನ್ನೆಲ್ಲ ನೋಡಿದಾಗ ನನಗೆ ಮತ್ತೆ ಯುದ್ಧ ಮಾಡುವಂತೆ ಉತ್ಸಾಹ ಚಿಮ್ಮಿ ಬರುತ್ತಿದೆ. ಅದು ಬಿರುಗಾಳಿಯಂತೆ ನನ್ನನ್ನು ಆವರಿಸಿಕೊಳ್ಳುತ್ತಿದೆ. ಮರುದನ್, ನೀನೂ ಅದನ್ನೊಮ್ಮೆ ಬಂದು ನೋಡು. ಅದನ್ನು ನೋಡಿ ನನ್ನ ವಿಷಯವನ್ನು ಕುರಿತು ಕಾವ್ಯ ರಚಿಸಲು ನಿನಗೆ ಸ್ಫೂರ್ತಿ ಬರಬಹುದು.

6

ಅಯ್ಯೋ ಮದುರೆಯ ಅಧಿಪತಿ ದೇವರೇ!
ರಾಜನ ಈ ಹುಚ್ಚನ್ನು ನೀನೇ ಬಿಡಿಸಬೇಕು.

7



ಮಹಾಕವಿಗಳೆ! ನೋಡಿ ಎಂತಹ ಅದ್ಭುತ ಚಿತ್ರ ! ಅವು ಮೌನವಾಗಿ ಮಾತಾಡುವಂತಿವೆ. ಇದರ ಸನ್ನಿವೇಶಗಳು ನಮ್ಮಲ್ಲಿ ತೀವ್ರವಾದ ಭಾವನೆಯನ್ನು ಕೆರಳಿಸುವಂತೆ ಕಲಾವಿದ ಅದನ್ನು ಚಿತ್ರಿಸಿದ್ದಾನೆ. ಕಲಾವಿದರೆ! ಕಾಲವನ್ನು ಮೀರಿ ನಿಲ್ಲುವ ನಿಮ್ಮ ರಚನೆಗಳಿಗಾಗಿ ಇದೋ, ಕಾಣಿಕೆಯನ್ನು ಸ್ವೀಕರಿಸಿ.

8

ರಾಜನಿಂದ ಕಾಣಿಕೆ ಸ್ವೀಕರಿಸುವ ಮೊದಲೇ ಮುತ್ತುಮಣಿ ಪ್ರಜ್ಞೆ ತಪ್ಪಿ ಬಿದ್ದ.

ಯಾರಲ್ಲಿ! ರಾಜವೈದ್ಯರನ್ನು ಕರೆದುಕೊಂಡು ಬನ್ನಿ!

9

ಮಹಾರಾಜ! ಕ್ಷಮಿಸಿ. ಮುತ್ತುಮಣಿ ದೈವಾಧೀನನಾದ.

ಅಯ್ಯೋ! ಮೃತ್ಯುದೇವತೆ ಇಷ್ಟು ಬೇಗನೆ ಬಂದುಬಿಟ್ಟನೆ?

10

ಕೆಲವು ದಿನಗಳ ನಂತರ...

ಮುತ್ತುಮಣಿಯ ಮರಣ ನನ್ನನ್ನು ಪೂರ್ತಿಯಾಗಿ ಕಂಗೆಡಿಸಿದೆ. ನನಗೆ ಯಾವುದರಲ್ಲೂ ಆಸಕ್ತಿಯೇ ಇಲ್ಲದಾಗಿದೆ.



ಮಹಾರಾಜ! ಜೀವನದ ನಶ್ವರತೆ ನಿನಗರ್ಥವಾಗಿದೆ. ಆದರೆ ಅದರಿಂದ ನಾವು ಚಿಂತಿಸುತ್ತ ಕೈಕಟ್ಟಿ ಕುಳಿತುಕೊಳ್ಳಬಾರದು. ಒಳ್ಳೆಯ ಕಾರ್ಯ ಮಾಡದೆ ಸುಮ್ಮನೆ ಸಾವನ್ನೇ ಎದುರು ನೋಡುತ್ತ ಇರುವುದೆ? ನಾವು ಸತ್ಕಾರ್ಯವನ್ನು ಬೇಗ ಬೇಗ ಮಾಡಿ ಮುಗಿಸಬೇಕು. ನಶ್ವರತೆ ಇದನ್ನೇ ನಮಗೆ ನೆನಪಿಸುವುದು. ಅಷ್ಟೇ ಅಲ್ಲ.....

11

ಇನ್ನೇನು, ಕವಿಗಳೆ? ಮುಂದುವರಿಸಿ..

ಮಹಾರಾಜ! ನೀವು ಒಬ್ಬ ಮಹಾನ್ ದೊರೆ, ನಿಮಗೆ ಶತ್ರುಗಳೇ ಇಲ್ಲ. ಇದು ನಮಗೆಲ್ಲ ಹೆಮ್ಮೆಯ ವಿಷಯ. ಯುದ್ಧದಿಂದಾಗಿ ನಮ್ಮ ಜನರಿಗೆ ಇದ್ದ ಎಷ್ಟೋ ಆವಶ್ಯಕತೆಗಳು ಪೂರ್ತಿಕೆಯಾಗಿಲ್ಲ. ಆದರೆ ಜನರು ತಾಳ್ಮೆಯಿಂದ ಸಹಿಸಿಕೊಂಡಿದ್ದಾರೆ. ಈಗ ಶತ್ರುಗಳು ಯಾರೂ ಇಲ್ಲ. ಆದಕಾರಣ ಈಗ ಯುದ್ಧ ಮಾಡುವ, ದಂಡೆತ್ತಿ ಹೋಗುವ ಆಲೋಚನೆಯನ್ನು ಬಿಡಿ. ಬೇರೆ ರಾಜ್ಯಗಳನ್ನು ಸಾಮಂತರನ್ನಾಗಿ ಮಾಡುವ ಕಾರ್ಯವನ್ನು ನಿಲ್ಲಿಸಿ. ಜನರು ನಿಮ್ಮಿಂದ ಬಯಸುವುದು ಶಾಂತಿ, ನೆಮ್ಮದಿಗಳಿಂದ ತುಂಬಿದ ಆಡಳಿತವನ್ನು. ಅದನ್ನು ನೀವು ನೆರವೇರಿಸಿ.

12

ರಾಜನು ಶೂರನಾಗಿರಬೇಕು ನಿಜ. ಅವನು ಜನರಿಗೆ ಉತ್ತಮ ಆಡಳಿತವನ್ನೂ ನೀಡಬೇಕು.

ಮಹಾಕವಿಗಳೆ, ನೀವು ನನ್ನ ಕಣ್ಣನ್ನು ತೆರೆಸಿದಿರಿ. ನನ್ನ ತಪ್ಪಿನ ಅರಿವು ಮಾಡಿಕೊಟ್ಟಿದ್ದೀರಿ. ನಾನು ಜನರ ಸೇವೆ ಮಾಡುವ ಬದಲು, ನಾನು ನನ್ನ ಶೌರ್ಯ, ಮಹಿಮೆಗಳನ್ನು ಹೆಚ್ಚು ಮಾಡಿದೆ. ಇಂದಿನಿಂದ ನಾನು ನನ್ನ ಜನರಿಗೆ ಒಳಿತನ್ನು ಮಾಡಲು ಪಣ ತೊಡುವೆ. ಇದು ನನ್ನ ವ್ರತ.

13

ಕವಿಗಳೆ, ಇನ್ನೊಂದು ಕೋರಿಕೆ. ಇಂದಿನಿಂದ ನೀವು ರಚಿಸುವ ಕಾವ್ಯದಲ್ಲಿ ನನ್ನ ಮಹಿಮೆಯನ್ನು ಹೊಗಳುವುದರ ಜೊತೆಗೆ, ಜೀವನದ ನಶ್ವರತೆಯ ಬಗೆಗೂ ಹಾಡಬೇಕು. ಇದರಿಂದ ರಾಜಂದಿರು ಜನರಿಗೆ ಒಳಿತನ್ನು ಮಾಡಲು ಸಿದ್ಧರಾಗುವರು.

ಮಹಾರಾಜ, ಇದು ಒಳ್ಳೆಯ ಕಾರ್ಯ. ನಾನು ಈಗ ರಚಿಸುತ್ತಿರುವ 'ಮದುರೈ ಶಾಂತಿ' ಎಂಬ ಕಾವ್ಯದಲ್ಲಿ ಅದನ್ನು ಸೇರಿಸುತ್ತೇನೆ.

ಇದರ ನಂತರ ಪಾಂಡ್ಯದೊರೆ ನೆಡುಂಚೆಳಿಯನ್‌ನ ರಾಜ್ಯಭಾರ ಶಾಂತಿ, ಸಮೃದ್ಧಿಗಳಿಂದ ತುಂಬಿಕೊಂಡಿತು.

14

ಮಾಂಗುಡಿ ಕವಿ ಮರುದನ್‌ನ ರಚನೆ 'ಮದುರೈ ಶಾಂತಿ'ಯ ಕೊನೆಯ ಭಾಗದಲ್ಲಿ ಪಾಂಡ್ಯ ದೊರೆಗಳ ಶೌರ್ಯ, ಪರಾಕ್ರಮಗಳೊಂದಿಗೆ ಮಾನವ ಜೀವನದ ನಶ್ವರತೆಯನ್ನೂ ಕವಿ ವರ್ಣಿಸುತ್ತಾನೆ.

15

ಜೀವನವೆಂಬುದು ನಶ್ವರ. ಬಂದು ಹೋಗುವ ಕನಸಿನಂತೆ ಇದು. ಯೌವನ, ಸೌಂದರ್ಯ ಎಲ್ಲವೂ ನಾಶವಾಗುವುವು. ಸಂಪತ್ತು ಮಾಯವಾಗುವುದು. ದೇಹ ಸೌಂದರ್ಯ ಇಲ್ಲದಾಗುವುದು. ಜೀವನವೇ ಒಣಗಿಹೋಗುವುದು. ಎಲ್ಲ ಸಾಧನೆಗಳೂ ನಾಶವಾಗುವುವು. ದೇವರೊಬ್ಬನೇ ಶಾಶ್ವತ.

– ಸ್ವಾಮಿ ವಿವೇಕಾನಂದ